## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.236/2022

| | | |
|---|---|---|
| ಸಾಕ್ಷಿದಾರರ ಹೆಸರು | – ಲತಾ | ಪಿಡಬ್ಲ್ಯೂ-1 |
| ತಂದೆಯ ಹೆಸರು | – ರಂಗನಾಥ | ಪಿಡಬ್ಲ್ಯೂ-1 |
| ವಯಸ್ಸು | – 46 ವರ್ಷ | |
| ಉದ್ಯೋಗ | – ಗಾರ್ಮೆಂಟ್ ಕೆಲಸ | |
| ವಾಸ | – ಬೆಂಗಳೂರು | |

**ದಿನಾಂಕಃ 06.05.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.2 ನನ್ನ ಮಗಳು. ಚಾಸಾ.3 , 4 ರವರು ನನಗೆ ಗೊತ್ತು. ಆರೋಪಿ ನನ್ನ ಗಂಡ. ಆರೋಪಿ ನನಗೆ ಮತ್ತು ನನ್ನ ಮಗಳಿಗೆ ಹೊಡೆದಿಲ್ಲ, ಬಡಿದಿಲ್ಲ, ಜಗಳ ಮಾಡಿಲ್ಲ, ಯಾವುದೇ ವಸ್ತುಗಳಿಂದ ಹೊಡೆದಿಲ್ಲ, ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ದುರಾರು ನೀಡಿಲ್ಲ. ಸಾಕ್ಷಿ ಹೇಳಿಕೆ ದೂರಿನಲ್ಲಿರುವ ಸಹಿ ನೋಡಿ ಗುರುತಿಸಿದ್ದು ಹೇಳಿಕೆ ದೂರನ್ನು ನಿಪಿ-1 ಎಂದು ಸಹಿ ನಿಪಿ-1 ಎ ಎಂದು ಗುರುತಿಸಲಾಯಿತು. 3 ವರ್ಷಗಳ ಹಿಂದೆ ನಿಪಿ-1 ಕ್ಕೆ ಸಹಿ ಮಾಡಿದ್ದೇನೆ. ದೂರನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಅದನ್ನು ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

25.11.2021 ರಂದು 11.30 ರ ಸಮಯದಲ್ಲಿ ಹಿರಿಯೂರು ತಾ ಕಸವನಹಳ್ಳಿ ಗ್ರಾಮದ ಚಾಸಾ.2 ರವರ ಮನೆಯ ಮುಂದಿದನ ಅಂಗಳದಲ್ಲಿ ನಾನು ಮತ್ತು ಚಾಸಾ.4 ರವರು ಮಾತನಾಡುತ್ತಾ ನಿಂತಿದ್ದಾಗ ಆರೋಪಿ ಏನೆ ಸೂಳೆ ಮುಂಡೆ ಭೋಸೂಡಿ ಮುಂಡೆ ಸಿಕ್ಕ ಸಿಕ್ಕವರ

ಬಳಿ ಮಾತನಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ನನ್ನ ಮೈಕೈಗೆ ಕೈಕಾಲುಗಳಿಂದ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಅಲ್ಲಿಯೇ ಬಿದ್ದಿದ್ದ ಇಟ್ಟಿಗೆ ತುಂಡಿನಿಂದ ನನ್ನ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಬಿಡಿಸಲು ಬಂದ ಚಾಸಾ .2 ರವರಿಗೂ ಕೂಡ ಆರೋಪಿ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ನಿಪಿ –1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ದಿಃ25.11.2021 ರಂದು ನಾನು ದೂರು ನೀಡುವ ಸಮಯದಲ್ಲಿ ಗಲಾಟೆ ಬಿಡಿಸಿದ್ದು ಮೇದ ಕರಿಯಪ್ಪನವರ ಹೆಸರನ್ನು ಹೇಳಿರುವುದಿಲ್ಲ ಗಲಾಟೆಯನ್ನು ಅಂಜಮ್ಮ ಮತ್ತು ಮೇದಕರಿಯಪ್ಪ ಇಬ್ಬರು ಬಿಡಿಸಿರುತ್ತಾರೆ. ಗಲಾಟೆ ಯಾದ ನಂತರ ನಾನು ನನ್ನ ಮಗಳ ಜೊತೆ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿದ್ದೇನೆ ಎಂದು ನನ್ನ ಮಗಳು ಮೈಕೈ ನೋವಾಗಿದ್ದರಿಂದ ಸ್ವಂತ ಉಪಚರಿಸಿ ಕೊಂಡಿರುತ್ತಾಳೆಂದು ನಾನು ಮರುಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮರು ಹೇಳಿಕೆ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಮರು ಹೇಳಿಕೆ ಭಾಗವನ್ನು ನಿಪಿ–2 ಎಂದು ಗುರುತಿಸಲಾಯಿತು. ಆರೋಪಿ ಮತ್ತು ನಾವು ಈಗ ರಾಜೀ ಮಾಡಿಕೊಂಡಿದ್ದೇವೆ ಎಂದರೆ ನಿಜ. ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಜೆ ಸಿ ವಕೀಲರಿಂದ–ಏನೂ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು